
ನಿರ್ಮೋಹ ಬೆಳೆಯತೊಡಗಿ ಅದೊಂದು ದಿನ ಉಟ್ಟ ಬಟ್ಟೆಯಲ್ಲೇ ಯಾರಿಗೂ ಹೇಳದೇ ಕೇಳದೆ ಊರಿಂದ ಕಣ್ಮರೆಯಾಗಿಬಿಟಿದ್ದ. ಹತ್ತು,ಇಪ್ಪತ್ತು ವರುಷಗಳು ಉರುಳಿದವು. ಗದ್ದಿಗ್ಯಪ್ಪನ ಸುಳಿವಿಲ್ಲದ್ದರಿಂದ ಸತ್ತೋ ಕೆಟ್ಟೋ ಹೋಗಿದ್ದಾನೆ ಅಂತ ಊರವರೆಲ್ಲಾ ನಂಬಿ ಅದೆಷ್ಟೋ ವರ್ಷಗಳಾಗಿದ್ದವು. ಹಂಗಾಗಿಯೇ ಗದ್ದಿಗ್ಯಪ್ಪನ ಹೊಲದ ಪಕ್ಕದ ಜಮೀನಿನ ವಿರೂಪಾಕ್ಷಪ್ಪ ಯಾವುದೇ ಅಳುಕಿಲ್ಲದೆ ಆ ಎರಡು ಎಕರೆಯನ್ನು ಸೇರಿಸಿಕೊಂಡು ಬೇಲಿ ಜಡಿದುಕೊಂಡು ಕೇಳಿದವರು ಬಾಯ್ಮುಚ್ಚಿಕೊಳ್ಳುವಂತೆ ಜಬರ್ದಸ್ತಾಗಿ ತನ್ನ ಹೆಸರಿಗೆ ಮಾಡಿಕೊಂಡುಬಿಟ್ಟಿದ್ದ.

ಊರು ಬಿಟ್ಟಿದ್ದ ಗದ್ದಿಗ್ಯಪ್ಪ ಎಡತಾಕದ ಊರುಗಳಿರಲಿಲ್ಲ, ಪುಣ್ಯಕ್ಷೇತ್ರಗಳಿರಲಿಲ್ಲ. ಸಿಕ್ಕಸಿಕ್ಕ ಕಡೆಯೆಲ್ಲಾ ತಿರುಗಿದ. ಸಾಧು ಸಂತರ ಜೊತೆ ಹಿಮಾಲಯಕ್ಕೂ ಹೋಗಿ ಅಲ್ಲೊಂದಷ್ಟು ದಿನ ಉಳಿದಿದ್ದ. ಇದ್ದರೆ ಈ ಊರು ಎದ್ದರೆ ಮುಂದಿನೂರು ಎಂಬಂತೆ ಅಲೆಯುತ್ತಿದ್ದ ಗದ್ದಿಗ್ಯಪ್ಪ ಮಾಡದ ಕೆಲಸಗಳಿರಲಿಲ್ಲ. ರೈಲು, ಬಸ್ಸು ನಿಲ್ದಾಣಗಳಲ್ಲಿ ಹಮಾಲಿಯಾಗಿ ದುಡಿದ. ಇನ್ನು ಹಳ್ಳಿಗಳಿಗೆ ಹೋದರೆ ಹೊಲ ತೋಟದ ಬದುಕನ್ನು ಮಾಡುತ್ತಾ ಅಲ್ಲೇ ಒಂದಷ್ಟು ದಿನ ನಿಂತು ಬಿಡುತ್ತಿದ್ದ. ಅವನ ಆ ಗೇಣುದ್ದದ ಗಡ್ಡ, ಜಡೆ ಹೆಣೆಯುವಂತಿದ್ದ ತಲೆಗೂದಲು, ಮಾಸಿರುತ್ತಿದ್ದ ಜುಬ್ಬ ಪೈಜಾಮಗಳ ಗದ್ದಿಗ್ಯಪ್ಪನನ್ನು ನೋಡಿದವರು ಯಾವೂರು ಎತ್ತ ಅಂತ ವಿಚಾರಿಸಿದರೆ, 'ಯಾವೂರೂಂತ ಹೇಳ್ಲಿ ಸ್ವಾಮಿ, ಈ ಲೋಕವೆಲ್ಲಾ ನನ್ನೂರೇ. ಎಲ್ಲರೂ ನಮ್ಮವರೇ' ಅಂದು ಬಿಡುತ್ತಿದ್ದ. 'ಹೋಗ್ಲಿ ಹೆಸರಾದ್ರೂ ಹೇಳಪ್ಪ' ಅಂತ ಕೇಳಿದ್ರೆ, 'ಗಾಂಧಿ' ಅಂದುಬಿಡುತ್ತಿದ್ದ. 'ಗಾಂಧಿ, ಅರೆ ಗಾಂಧಿ' ಅಂತ ಅಚ್ಚರಿ ಪಡುವ ಸರದಿ ಕೇಳಿದವರದಾಗುತ್ತಿತ್ತು. 'ಅಲ್ಲಪ್ಪಾ ನೀನು ಗಾಂಧಿ ಥರ ಕಾಣ್ಸಲ್ಲ, ಥೇಟ್ ವಿನೋಬಾ ಭಾವೆ ಥರ ಕಾಣುಸ್ತೀಯಾ' ಅಂತ ಅಂದ್ರೆ, 'ಹಂಗಂತ್ಲೇ ಇಟ್ಕೋ' ಅಂತ ಅನ್ನುತ್ತಿದ್ದ. ಯಾರೆಷ್ಟೇ ಕೇಳಿದರೂ ಅಷ್ಟೂ ದಿನ ಯಾರೊಬ್ಬರ ಬಳಿಯೂ ತನ್ನ ಬದುಕಿನ ಕಥೆ, ವ್ಯಥೆಗಳನ್ನು ಬಾಯ್ಬಿಟ್ಟಿರಲಿಲ್ಲ. ಇದು ತನ್ನೊಬ್ಬನ ಕಷ್ಟವಲ್ಲ ಅಂತ ತನ್ನೊಳಗಿನ ತಳಮಳವನ್ನು ತಾನೇ ಸಂತೈಸಿಕೊಳ್ಳುವಷ್ಟು ಮಾಗಿದ್ದ ಗದ್ದಿಗ್ಯಪ್ಪ.



ಹಿಂಗೆ ದಿಕ್ಕು ದೆಸೆಯಿಲ್ಲದೆ ಅಲೆಯುತ್ತಿದ್ದ ಗದ್ದಿಗ್ಯಪ್ಪ ಕಳೆದೊಂದು ವರ್ಷದಿಂದ ಯಾಕೋ ಊರಿನ ನೆನಪಿನ ಹಂಗಿಗೆ ಬಿದ್ದಿದ್ದ. ತನ್ನೂರು, ತನ್ನ ಮನೆ ಹೊಲ ಅದರೊಳಗಿನ ಮಗ ಗಾಂಧಿಯ ಸಮಾಧಿಯನ್ನು ನೋಡಬೇಕೆನಿಸತೊಡಗಿತ್ತು. ಎಲ್ಲದನ್ನೂ ನೀಗಿಕೊಂಡವನಂತೆ ನಿಸೂರಾಗಿದ್ದವನಿಗೆ ಮತ್ತೀ ತನ್ನದು ತನ್ನವರೆಂಬ ಮೋಹವಾದರೂ ಯಾಕೆ ಅಂತ ಆಗಾಗ ತನ್ನನ್ನು ತಾನೇ ಕೇಳಿಕೊಳ್ಳುತ್ತಿದ್ದ. ಆದರೂ ಕಡೆಗಾಲದಲ್ಲಿ ಬೀದಿ ಹೆಣವಾಗುವ ಬದಲು ತನ್ನೂರಿನಲ್ಲೇ ಕಣ್ಮುಚ್ಚಬೇಕೆಂಬ ಇರಾದೆಗೂ ಬಿದ್ದಿದ್ದ. ದಿನ ಕಳೆದಂತೆ ಅಂಥ ಇರಾದೆಯ ವಜನ್ನಿಗೆ ಬಾಗಿದವನಂತೆ ಊರಿನ ದಾರಿ ಹಿಡಿದಿದ್ದ. ಅದೂ ಬರೋಬ್ಬರಿ ಇಪ್ಪತ್ತು ವರ್ಷಗಳ ನಂತರ.

## 5

ತೋಟದೊಳಗಿಂದ ಊರ ಕಡೆ ಮುಖ ಮಾಡಿದ ಗದ್ದಿಗ್ಯಪ್ಪನಿಗೆ ರೈಲ್ವೆ ಹಳಿಗಳನ್ನು ದಾಟಲು ದಿಬ್ಬವೊಂದನ್ನು ಹತ್ತಿ ಇಳಿಯಬೇಕಾಗಿದ್ದ ದಾರಿ ಮಾತ್ರ ಅವನ ಕಣ್ಣುಗಳಿಗೆ ಕಟ್ಟಿದಂತಿತ್ತು. ಆದರೀಗ ಅವನೆದುರು ಯಾವ ದಿಬ್ಬವೂ ಇರಲಿಲ್ಲ. ಬದಲಿಗೆ ರೈಲ್ವೆ ಹಳಿಗಳ ಕೆಳಗಾಸಿ ಕೊರೆದಿದ್ದ ಸುರಂಗದಂಥ ದಾರಿಯಲ್ಲಿ ನಡೆದು ಆಚೆ ದಾಟಿದಾಗ ಊರಿಗೇ ಊರೇ ಬದಲಾಗಿ ಕೂತದ್ದು ಬೀದಿ ದೀಪಗಳ ಬೆಳಕಲ್ಲಿ ಎದ್ದು ಕಾಣುತ್ತಿತ್ತು. ಎದುರಿಗೆ ಕಾಣುತ್ತಿದ್ದ ಸ್ಕೂಲು, ಅದರ ವಾರಾಸಿಗಿದ್ದ ಅಂಗನವಾಡಿ, ಅವೆರಡರಿಂದ ಕೊಂಚ ದೂರದಲ್ಲಿದ್ದ ಹಾಲಿನ ಡೈರಿ, ಅವುಗಳಾಚೆಗೆ ಹೊಸದಾಗಿ ಎದ್ದಿದ್ದ ದೇವಸ್ಥಾನ, ಕುಂಬಾರರ ಆವಿಗೆಗಳಿದ್ದ ಜಾಗದಲ್ಲಿದ್ದ ಅಂಗಡಿ ಮಳಿಗೆಗಳು, ಅವುಗಳಿಂದ ಕೊಂಚ ದೂರವಿದ್ದ ಮಿನಿ ವಾಟರ್ ಟ್ಯಾಂಕ್... ನೋಡನೋಡುತ್ತಲೇ ಅವೆಲ್ಲವೂ ಎದ್ದು